ದಿನಾಂಕಃ 08-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ವಾದಿ ಪರ ಶ್ರೀ ಹೆಚ್ ಎಸ್ ಡಿ ವಕೀಲರಿಂದ,

1) ನಾನು ಡಿಪ್ಲೋಮಾ ಪದವಿ ವ್ಯಾಸಂಗ ಮಾಡಿರುತ್ತೇನೆ. ನಾನು ಸಲ್ಲಿಸಿರುವ ಪ್ರತಿವಾದ ಪತ್ರ ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಖಂಡಿಕೆ 3 ರಲ್ಲಿ ತಿಳಿಸಿರುವ ವಸ್ತು ಸ್ಥಿತಿಯನ್ನು ನನ್ನ ಲಿಖಿತ ಪ್ರತಿವಾದ ಪತ್ರದಲ್ಲಿ ಹೇಳಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಖಂಡಿಕೆ 3 ತಿಳಿಸಿರುವ ವಸ್ತು ಸ್ಥಿತಿಯನ್ನು ಪ್ರತಿವಾದ ಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

2) ಕ್ರಯ ಪತ್ರ ದಲ್ಲಿ ವಿಸ್ತೀರ್ಣ ತಪ್ಪಾಗಿದೆ ಎಂದು ನನಗೆ ತಿಳಿದ ನಂತರ ನಾನು ವಿಜಯೆಂದ್ರ ರವರಿಂದ ತಿದ್ದುಪಡಿ ಪತ್ರ ಮಾಡಿಸಿಕೊಳ್ಳಲು ತೊಂದರೆ ಇರಲಿಲ್ಲ. ಸದರಿ ಸರ್ವೆ ನಂಬರ ತಪ್ಪಾಗಿದೆ ಎಂದು ನನಗೆ ಈ ದಾವೆಯಲ್ಲಿ ಸಮನು ಜಾರಿಯಾದಾಗ ಗೊತ್ತಾಗಿರುತ್ತದೆ. ನನ್ನ ಕ್ರಯ ಪತ್ರದಲ್ಲಿ ಪೂರ್ವ, ಉತ್ತರ ಮತ್ತು ದಕ್ಷಿಣಕ್ಕೆ ಖಾಸಗಿ ರವರ ವಸತುಗಳು ಎಂದು ತೋರಿಸಿದ್ದು ಸದರಿ ಖಾಸಗಿ ವ್ಯಕ್ತಿಗಳು ಯಾರು ಎಂದು ನನಗೆ ಗೊತ್ತಿರುವುದಿಲ್ಲ. ನಾನು ಆಸ್ತಿಯನ್ನು ಖರೀದಿ ಮಾಡುವ ಕಾಲಕ್ಕೆ ಚೆಕ್ಕುಬಂದಿ ದಾರರ ಹೆಸರುಗಳನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಿರುವುದಿಲ್ಲ. ಈ ದಾವೆಯನ್ನು ಸಲ್ಲಿಸಿದ ನಂತರವು ನಾನು ಚೆಕ್ಕುಬಂದಿದಾರರ ಹೆಸರುಗಳನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಿರುವುದಿಲ್ಲ.

3) ಕಾಳೇನಹಳ್ಳಿ ಗ್ರಾಮದ ಸರ್ವೆ ನಂ.152/2 ರಲ್ಲಿ 1 ಎಕರೆ 34 ಗುಂಟೆ ವಿಸ್ತೀರ್ಣ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಸರ್ವೇ ನಂ. 152/2 ರಲ್ಲಿರುವ 1 ಎಕರೆ 34 ಗುಂಟೆಯ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ- ಕುಳ್ಳಯ್ಯ ರವರ ಜಮೀನು,

ಪಶ್ಚಿಮಕ್ಕೆ– ಹಾಸನ ಮೈಸೂರು ರಸ್ತ, ಉತ್ತರಕ್ಕೆ–ಜೆ ಎಸ್ ಎಸ್ ಸುತ್ತೂರು ರವರ ಆಸ್ತಿ ಮತ್ತು ದಕ್ಷಿಣಕ್ಕೆ ಚೌಕಹಳ್ಳಿ ಕಾಲೋನಿಗೆ ಹೋಗುವ ರಸ್ತೆ ಎಂದರೆ ಸರಿಯಲ್ಲ.

4) ಪ್ರತಿವಾದಿ 1, 3 ರಿಂದ 5 ರವರು ಸಲ್ಲಿಸಿದ ಪ್ರತಿವಾದ ಪತ್ರದ ಪ್ರಕಾರ ನಾನು ಖರೀದ ಮಾಡಿರುವ ಚೆಕ್ಕುಬಂದಿ ಪೂರ್ವಕ್ಕೆ–ಆಶಾ ಕೋಂ ಚೆನ್ನಬಸಪ್ಪ ರವರ ಜಮೀನು, ಪಶ್ಚಿಮಕ್ಕೆ– ಹಾಸನ ಮೈಸೂರು ರಸ್ತೆ, ಉತ್ತರಕ್ಕೆ–ಜೆ ಎಸ್ ಎಸ್ ಸುತ್ತೂರು ರವರ ಆಸ್ತಿ ಮತ್ತು ದಕ್ಷಿಣಕ್ಕೆ ಆಶಾ ಕೋಂ ಚೆನ್ನಬಸಪ್ಪ ರವರ ಆಸ್ತಿ ಎಂದು ತಿಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

5) ವಾದಿಯು ಖರೀದಿ ಮಾಡಿರುವ ಆಸ್ತಿಯ ಚೆಕ್ಕು ಬಂದಿ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿ ಚೆಕ್ಕುಬಂದಿ ಪೂರ್ವಕ್ಕೆ– ವಿಜಯೆಂದ್ರ ರವರ ಉಳಿಕೆ ಆಸ್ತಿ ಎಂದರೆ ನನಗೆ ಗೊತ್ತಿಲ್ಲ, ಪಶ್ಚಿಮಕ್ಕೆ– ಹಾಸನ ಮೈಸೂರು ರಸ್ತೆ ಎಂದರೆ ನನಗೆ ಗೊತ್ತಿಲ್ಲ, ಉತ್ತರಕ್ಕೆ–ಜೆ ಎಸ್ ಎಸ್ ಸುತ್ತೂರು ರವರ ಆಸ್ತಿ ಎಂದರೆ ನನಗೆ ಗೊತ್ತಿಲ್ಲ ಮತ್ತು ದಕ್ಷಿಣಕ್ಕೆ ವಿಜೇಯಂದ್ರ ರವರ ಉಳಿಕೆ ಆಸ್ತಿ ಎಂದರೆ ನನಗೆ ಗೊತ್ತಿರುವುದಿಲ್ಲ.

6) ವಿಜಯೆಂದ್ರ ರವರು ಮಹದೇವಯ್ಯ ರವರಿಗೆ ಮಾರಾಟ ಮಾಡಿದ ಬಗ್ಗೆ ನಿಡಿ–05 ಮ್ಯುಟೇಷನ್ ವಹಿಯಲ್ಲಿ ನಮೂದಾಗಿರುತ್ತದೆ ಎಂದರೆ ಸರಿ. ಸದರಿ ಆಸ್ತಿಯು ಆಶಾ ಕೋಂ ಚೆನ್ನಬಸಪ್ಪ ರವರ ಹೆಸರಿನಲ್ಲಿ ಮುಂದುವರೆಯುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಡಿ–11 ಪಹಣಿ ಪತ್ರಿಕೆಯಲ್ಲಿ ನಮೂದಾಗಿರುವ ವಿಷಯದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾನು ಆಸ್ತಿಯನ್ನು ಖರೀದಿ ಮಾಡಿದ್ದೇನು ಎಂದು ಹೇಳುವ ಕಾಲಕ್ಕೆ ಸದರಿ ಆಸ್ತಿಯ ಖಾತೆ ಗುರುಪ್ರಸಾದ್ ರವರ ಹೆಸರಿನಲ್ಲಿ ಇತ್ತು. ಗುರುಪ್ರಸಾದ್ ರವರಿಗೆ ಖಾತೆಯು ಅವರ ತಂದೆಯ ಮೂಲಕ ಬಂದಿರುತ್ತದೆ. ಗುರುಪ್ರಸಾದ್ ರವರ ಹೆಸರಿಗೆ ಖಾತೆ ನಮೂದು ಆಗಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ನಾನು ಸದರಿ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

7) ನಿಡಿ–09 ದಾಖಲೆಯಂತೆ ಭೂ ಪರಿವರ್ತನೆ ಆಗಿ ದೊಡ್ಡಕೊಪ್ಪಲು ಗ್ರಾಮ ಪಂಚಾಯತಿ ಹೆಸರಿನಲ್ಲಿ 10 ಗುಂಟೆ ಖಾತೆ ನಮೂದಾಗಿರುತ್ತದೆ ಎಂದರೆ ಸರಿ. ನಿಪಿ–39 ರಂತೆ ವಿಜಯೆಂದ್ರ ರವರ ಹೆಸರಿಗೆ ಎಂ ಆರ್ ನಂ. 21/85–86 ರಂತೆ ಖಾತೆ ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ಸಿದ್ದೇಗೌಡ ರವರು ವಿಜಯೆಂದ್ರ ರವರಿಗೆ ಒಟ್ಟು 1 ಎಕರೆ 34 ಗುಂಟೆಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ತಪ್ಪಾಗಿ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಗೆ ವಿಜಯೆಂದ್ರ ರವರು ದಾವಾ ಸ್ವತ್ತನ್ನು ಮಾರಾಟ ಮಾಡುವ ಕಾಲಕ್ಕೆ ವಿಜಯೆಂದ್ರ ರವರ ಹೆಸರಿನಲ್ಲಿ 1 ಎಕರೆ 34 ಗುಂಟೆ ಆಸ್ತಿಯ ಖಾತೆ ಇತ್ತು ಎಂದರೆ ನನಗೆ ಗೊತ್ತಿರುವುದಿಲ್ಲ.

8) ವಾದಿಯ ಹೆಸರಿಗೆ ಕ್ರಯ ಪತ್ರ ಆಗಿರುವ ವಿಷಯ ನ್ಯಾಯಾಲಯದಿಂದ ಸಮನು ಜಾರಿ ಆದ ನಂತರ ಗೊತ್ತಾಗಿರುತ್ತದೆ. ವಾದಿಯ ಕ್ರಯ ಪತ್ರವನ್ನು ನಾನು ಪ್ರಶ್ನೇ ಮಾಡಿರುವುದಿಲ್ಲ. ವಿಜಯೆಂದ್ರ ರವರು ಬರೆಸಿಕೊಂಡಿರುವ ಕ್ರಯ ಪತ್ರವನ್ನು ನಾನು ಪ್ರಶ್ನೇ ಮಾಡಿರುವುದಿಲ್ಲ. ಸರ್ವೇ ನಂ. 152/2 ರಲ್ಲಿ 1 ಎಕರೆ 34 ಗುಂಟೆ ಆಸ್ತಿಯನ್ನು ವಿಜಯೆಂದ್ರ ರವರು ಕ್ರಯಕ್ಕೆ ಪಡೆದು ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ. ದಿನಾಂಕ 24/08/1979 ರಂದು 10 ಗುಂಟೆ ಆಸ್ತಿಯು ಭೂ ಪರಿವರ್ತನೆ ಆಗಿರುತ್ತದೆ ಎಂದರೆ ಸರಿ. ಸದರಿ 10 ಗುಂಟೆ ಆಸ್ತಿಯನ್ನು ಸಹ ವಿಜಯೆಂದ್ರ ರವರು ಕ್ರಯ ಪತ್ರದಂತೆ ಖಾತೆ ಬದಲಾವಣೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

9) ವಾದಿಯ ಹೆಸರಿಗೆ ಪಂಚಾಯತಿಯಲ್ಲಿ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. 1995 ನೇ ಸಾಲಿನಿಂದ 2014 ರವರೆಗೆ ವಾದಿ ಕಂದಾಯ ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಆಸ್ತಿಯನ್ನು ಖರೀದಿ ಮಾಡುವ ಪೂರ್ವದಲ್ಲಿ ನಾನು ರುಣಭಾರ ರಾಹಿತ್ಯ ಪ್ರಮಾಣ ಪತ್ರದ ದಾಖಲೆಗಳನ್ನು ಪರಿಶೀಲನೆ ಮಾಡಿರುವುದಿಲ್ಲ. ನಾನು ಆಸ್ತಿಯನ್ನು ಖರೀದಿ ಮಾಡುವ ಪೂರ್ವದಲ್ಲಿ ವಿಜಯೆಂದ್ರ ರವರಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲನೆ ಮಾಡಿರುವುದಿಲ್ಲ. ನಾನು ಖರೀದಿ ಮಾಡಿರುವ ಆಸ್ತಿಯ ಅಸೆಸಮೆಂಟ್ ಸಂಖ್ಯೆ 70 ಆಗಿರುತ್ತದೆ. ಅದೇರೀತಿ ಸಿದ್ದೇಗೌಡ

ರವರ ಹೆಸರಿನಲ್ಲಿ ಅಸೆಸಮೆಂಟ್ ಸಂಖ್ಯೆ 70 ಆಗಿರುತ್ತದೆ. ಅದೇ ರೀತಿ ದಾವಾ ಸ್ವತ್ತು ಅಸೆಸಮೆಂಟ್ ಸಂಖ್ಯೆ 70 ಆಗಿರುತ್ತದೆ. ನಾನು ಖರೀದಿ ಮಾಡುವ ಪೂರ್ವದಲ್ಲಿ ವಾದಿಯ ಹೆಸರಿಗೆ ಅಸಸೆಮೆಂಟ್ ಸಂಖ್ಯೆ 70 ಆಸ್ತಿಯ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸರಿಯಲ್ಲ. ನನಗೆ ಈ ಹಿಂದೆ ಆಗಿರುವ ಕ್ರಯ ವ್ಯವಹಾರಗಳು ಗೊತ್ತಿದ್ದರೂ ಸಹ ವಾದಿಗೆ ತೊಂದರೆ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಇತರೇ ಪ್ರತಿವಾದಿಗಳು ವಾದಿಯ ದಾವಾ ಸ್ವತ್ತಿಗೆ ಅಡಚಣೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಪ್ರತಿವಾದಿ ಪರ 6 ರಿಂದ 9 ರವರು ಲಿಖಿತ ತಕರಾರು ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ